ಕರ್ನಾಟಕ ಸರ್ಕಾರ

ಸಂಖ್ಯೆ:ತಾಂ.ಅ.ಸುತ್ತೋಲೆ.5:2002–2003.

ನಿರ್ದೇಶಕರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ
ಬೆಂಗಳೂರು, ದಿ:6.1.2003.

## ಸುತ್ತೋಲೆ

ವಿಷಯ:– ಹಿಸ್ಸಾ ಸರ್ವೆ ಕಾಲದಲ್ಲಿ ಆರ್.ಆರ್.ಟಿಪ್ಪಣಿ ಪತ್ರಗಳನ್ನು ತಯಾರಿಸಲಾಗಿದ್ದು ಆಕಾರಬಂದಿನಲ್ಲಿ ಪೂರ್ಣ ನಂಬರು: ಹಿಡುವಳಿ ಇರುವ ಬಗ್ಗೆ.

o o o

ಬಹಳ ಗ್ರಾಮದ ಮೂಲ ಭೂದಾಖಲೆಗಳಲ್ಲಿರುವ ಹಿಸ್ಸಾ ಸರ್ವೆ ದಾಖಲೆಗಳಲ್ಲಿ ಕೆಲವು ಸರ್ವೆ ನಂಬರುಗಳಿಗೆ ಪ್ರಿಲಿಮಿನರಿ ದಾಖಲೆಗಳಂತೆ ಹಿಸ್ಸಾಗಳನ್ನು ಮಾಡಿ ದಾಖಲೆಗಳನ್ನು ತಯಾರಿಸಲಾಗಿದೆ. ಆದರೆ ಆಕಾರಬಂದಿಗೆ ಹಿಸ್ಸಾಗಳ ವಿವರ : ದಾಖಲೆ ಬಂದಿರುವುದಿಲ್ಲ. ಬೆಂಗಳೂರು ದಕ್ಷಿಣ ತಾಲ್ಲೂಕು, ಸರ್ಜಾಪುರ ಹೋಬಳಿ, ದೊಡ್ಡ ತೋಗೂರು ಗ್ರಾಮದ ಸರ್ವೆ ನಂಬರ್ 68 ರಲ್ಲಿ ಇಂಥಹ ಪ್ರಕರಣ ಒಂದು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ವಾಸ್ತವವಾಗಿ ದೊಡ್ಡ ತೋಗೂರು ಗ್ರಾಮದ ಸ.ನಂ.68 ಮೂಲ ಭೂದಾಖಲೆಗಳಂತೆ ಸರ್ಕಾರಿ ಗೋಮಾಳವಾಗಿದ್ದು ಆಕಾರಬಂದಿನಲ್ಲಿ 'ಬಿ' ಖರಾಬಿನಲ್ಲಿ ದಾಖಲಿರುತ್ತದೆ. ಹಿಸ್ಸೆಗಳಾಗಿರುವುದಿಲ್ಲ. ಆದರೆ 1929ರ ಹಿಸ್ಸಾ ಸರ್ವೆ ಕಾಲದಲ್ಲಿ ಸ.ನಂ. 68 ರಲ್ಲಿ 1 ರಿಂದ 4 ಹಿಸ್ಸಾಗಳನ್ನು ಮಾಡಿ ಆರ್.ಆರ್.ಟಿಪ್ಪಣಿ ಪತ್ರಗಳನ್ನು ಮಾತ್ರ ಮಾಡಿದೆ ಹಾಗೂ ಕಡತವನ್ನು ತಾಲ್ಲೂಕಿಗೆ ಕಳುಹಿಸುವ ಬಗ್ಗೆ ಷರಾ ಬರೆಯಲಾಗಿದೆ. ಈ ಅವಧಿಯಲ್ಲಿ ಜಾರಿಯಾಗದೇ ಅಂದರೆ ಫೈನಲ್ ಪ್ರತಿ ತಯಾರಿಸಿಲ್ಲ ಮತ್ತು ಆಕಾರಬಂದಿನಲ್ಲಿ ಹಿಸ್ಸಾ ದಾಖಲೆ ಬಂದಿರುವುದಿಲ್ಲ. ಅಂದರೆ ಸಂಬಂಧಿಸಿದ ಕಡತ, ಆರ್.ಆರ್ – ಪಿ.ಆರ್. ಅಥವಾ ಇನ್ಯಾವುದೇ ಅಗತ್ಯ ಕಡತ ದೊರೆಯದೇ ಇದ್ದುದರಿಂದ ಹಿಸ್ಸಾ ಸರ್ವೆಯನ್ನು ಕೈ ಬಿಟ್ಟಿರುವುದು ಸ್ಪಷ್ಟವಾಗುತ್ತದೆ. ನಂತರ 1978 ರಲ್ಲಿ ಸ.ನಂ. 68ರ ಪೂರಾ ಜಮೀನನ್ನು ಕೆ.ಐ.ಎ.ಡಿ.ಬಿ.ಗೆ ಭೂಸ್ವಾಧೀನಗೊಂಡಿರುತ್ತದೆ. ಆದರೆ ಇತ್ತೀಚೆಗೆ ಕೆಲವು ಹಿತಾಸಕ್ತರು ಸ.ನಂ.68 ರಲ್ಲಿ ಹಿಸ್ಸೆಗಳಾಗಿದ್ದು ಪಕ್ಕಾ ಪೋಡಿಯಾಗಿರುವ ರೀತಿಯಲ್ಲಿ ಕಂದಾಯ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಕೆ.ಐ.ಎ.ಡಿ.ಬಿ.ಯಿಂದ ಭೂಪರಿಹಾರಕ್ಕೆ ಪ್ರಯತ್ನಿಸಿದ್ದರು. ಆದರೆ ಕಂದಾಯ ದಾಖಲೆಗಳಲ್ಲಿದ್ದರೂ ಸಹ ಇವು ಕಲ್ಪಿತ ದಾಖಲೆಗಳೆಂದು ರುಜುವಾತಾಗಿರುತ್ತದೆ. ಅಂತಿಮವಾಗಿ ಈ ಸಂಬಂಧ ಅವರು ದಾಖಲಿಸಿದ್ದ ರಿಟ್ ಪಿ.ನಂ.22709:98 ಪ್ರಕರಣವು ಭೂಮಾಪನ ದಾಖಲೆಗಳನ್ನು ಪರಿಗಣಿಸಿ ಸರ್ಕಾರದ ಪರವಾಗಿ ಆದೇಶವಾಗಿರುತ್ತದೆ.

ಆದ್ದರಿಂದ ಇಂತಹ ದಾಖಲೆಗಳ ಬಗ್ಗೆ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿದೆ.

1. ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ರಾಜ್ಯದ ಯಾವುದೇ ಭೂಮಾಪನ ಕಛೇರಿಗಳಲ್ಲಿ ಸ.ನಂ. : ಹಿಸ್ಸಾಗಳ ದಾಖಲೆಯ ನಕಲು ಕೋರಿ ಅರ್ಜಿ ಸ್ವೀಕೃತವಾದ ಕೂಡಲೇ ಕೆ.ಡಿ.ಟಿ: ಆಕಾರಬಂದನ್ನು ಪರಿಶೀಲಿಸುವುದು. ಅರ್ಜಿದಾರರು ಕೋರಿರುವ ನಂಬರು ಆಕಾರಬಂದಿನಲ್ಲಿ: ಕೆ.ಡಿ.ಟಿ.ಯಲ್ಲಿ ಪ್ರತ್ಯೇಕ ನಂಬರಾಗಿ ದಾಖಲಿದ್ದಲ್ಲಿ ಮಾತ್ರ ನಕಲನ್ನು ವಿತರಿಸತಕ್ಕದ್ದು. ಇಲ್ಲವಾದಲ್ಲಿ ಆಕಾರಬಂದಿನಂತೆ ನಂಬರು : ಪೋಡಿ ನಂಬರು : ಹಿಸ್ಸೆಗಳಾಗಿಲ್ಲವೆಂಬ ಕಾರಣ ನೀಡಿ ಹಿಂಬರಹ ನೀಡತಕ್ಕದ್ದು.

2. ಹಿಸ್ಸಾ ಸರ್ವೆ ಕಾಲದಲ್ಲಿ ಆರ್.ಆರ್.ಟಿಪ್ಪಣಿ ಪಕ್ಕಾಗಳನ್ನು ತಯಾರಿಸಲಾಗಿದ್ದು ಆಕಾರಬಂದಿನಲ್ಲಿ ಬರದೇ ಹೋಗಿದ್ದಲ್ಲಿ ಇಂತಹ ನಂಬರುಗಳ ನಕಲು ನೀಡತಕ್ಕದ್ದಲ್ಲ ಹಾಗೂ ಯಾವುದೇ ಕಾರಣಕ್ಕೂ ಆಕಾರಬಂದಿನಲ್ಲಿ ಬರೆಯತಕ್ಕದ್ದಲ್ಲ.

3. ಆಕಾರಬಂದಿನಲ್ಲಿ ದಾಖಲೆ ಇಲ್ಲದ ಇಂತಹ ಹಿಸ್ಸಾ ಸರ್ವೆ ದಾಖಲೆಗಳು, ಹಿಸ್ಸಾ ಸರ್ವೆ ಮೂಲ ಕಡತದಲ್ಲಿ ಕಂಡು ಬಂದಲ್ಲಿ ಅಂತಹ ಪ್ರಕರಣಗಳ ವಿವರಗಳನ್ನು (ಉಪ ನಿರ್ದೇಶಕರು:) ಜಂಟಿ ನಿರ್ದೇಶಕರವರ ಗಮನಕ್ಕೆ ತಂದು ಅವರಿಂದ ಸೂಕ್ತ ಆದೇಶಗಳನ್ನು ಪಡೆದು "ಈ ದಾಖಲೆಯನ್ನು ರದ್ದುಪಡಿಸಿದೆ, ನಕಲು ಕೊಡತಕ್ಕದ್ದಲ್ಲ" ಎಂದು ಷರಾ ಬರೆದು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸತಕ್ಕದ್ದು:

4. ಒಂದು ವೇಳೆ ಆಕಾರಬಂದ್‌ಗೆ ಬರಲಾರದ ಆರ್.ಆರ್.ಟಿಪ್ಪಣಿ ಪಕ್ಕಾಗಳು ಈಗಿನ ಜಮೀನು ಸ್ಥಿತಿಗೆ ತಾಳೆ ಇದ್ದರೂ ಸಹ ಆಕಾರಬಂದ್ ಬರೆಯತಕ್ಕದ್ದಲ್ಲ. ಇಂತಹವುಗಳನ್ನು ಹೊಸ ಪೋಡಿ ಪ್ರಕರಣವೆಂದು ಪರಿಗಣಿಸಿ ಅಗತ್ಯ ದಾಖಲೆಗಳು ಕಂದಾಯ ಇಲಾಖೆಯಿಂದ ಬಂದ ನಂತರ ಪೋಡಿ ಮಾಡಿ ಆಕಾರಬಂದು ಬರೆಯತಕ್ಕದ್ದು.

ಈ ಮೇಲ್ಕಂಡ ಸೂಚನೆಗಳು ತಕ್ಷಣದಿಂದ ಜಾರಿಗೆ ಬಂದಿರುತ್ತವೆ. ಸುತ್ತೋಲೆ ಮುಟ್ಟಿದ್ದಕ್ಕೆ ಸ್ವೀಕೃತಿ ಕಳುಹಿಸುವುದು.

(ಸಹಿ)
ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪ್ರತಿಯನ್ನು:-

ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮತ್ತು ತಾಲ್ಲೂಕು ಭೂಮಾಪನ ಕಛೇರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ನಿರ್ದೇಶಕರ ಪರವಾಗಿ,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಭಾರತ ಸರ್ಕಾರದ ಸೇವೆಯಲ್ಲಿ

ಬಿ.ಎಸ್.

ತಾಲ್ಲೂಕು ಭೂಮಾಪನ ಕಛೇರಿ